**ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು, ದಿನಾಂಕ.20.03.2024**

## ಪಾಟಿ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀ.ಎಂ ಕೆ ವಕೀಲರಿಂದಃ

1. ನಾನು ಈ ದಾವೆಯನ್ನು ದೇವರಾಜು ಎಂಬುವವರ ವಿರುದ್ದ ಸಲ್ಲಿಸಿರುತ್ತೇನೆ. ಈ ದಾವೆ ದಾಖಲಿಸುವ ಸಂದರ್ಬದಲ್ಲಿ ನೊಂದಣಿ ಪತ್ರ ಹಾಗೂ ಎಲ್ಲಾ ದಾಖಲಾತಿಗಳು ಇದ್ದವು. ದಾವಾ ಆಸ್ತಿಯ ಸರ್ವೆ ನಂ.412/2 ಆಗಿರುತ್ತದೆ. ಸದರಿ ಆಸ್ತಿಯನ್ನು ನಾವು ಪ್ಯಾರಿಜಾನ್ ಎಂಬುವವರಿಂದ ಮಾಡಿಕೊಂಡಿರುತ್ತೇವೆ. ಸದರಿ ಪ್ಯಾರಿಜಾನ್ ರವರು ದಾವಾ ಆಸ್ತಿಯನ್ನು ಅವರ ತಾಯಿಯಿಂದ ತಮ್ಮ ಹೆಸರಿಗೆ ಮಾಡಿಕೊಂಡಿದ್ದರು. ದಾವಾ ಆಸ್ತಿಯ ಒಟ್ಟು ವಿಸ್ತೀರ್ಣ ನನಗೆ ಗೊತ್ತಿರುವುದಿಲ್ಲ. ದಾವಾ ಆಸ್ತಿ ಪೋಡಿ ಆಗಿತ್ತಾ ಎಂದರೆ ಸಾಕ್ಷಿ ಆಗಿರಲಿಲ್ಲ ಎಂದು ನುಡಿಯುತ್ತಾರೆ. ದಾವಾ ಆಸ್ತಿಯ ಚೆಕ್ಕುಬಂದಿ ಪಶ್ಚಿಮಕ್ಕೆ ನಮ್ಮದೇ ಆಸ್ತಿ ಇರುತ್ತದೆ. ಈ ದಾವೆಯನ್ನು ನಾನು ಕೇವಲ 2 ನೇ ಪ್ರತಿವಾದಿ ವಿರುದ್ದ ಮಾತ್ರ ಸಲ್ಲಿಸಿರುತ್ತೇನೆ. 1 ನೇ ಪ್ರತಿವಾದಿ ನಮಗೆ ಯಾವ ತೊಂದರೆ ಕೊಟ್ಟಿರಲಿಲ್ಲ. ದಾವಾ ಆಸ್ತಿಯನ್ನು ಯಾವ ವರ್್ಷದಲ್ಲಿ ಖರೀದಿಸಿದೆವು ಎಂದು ನೆನಪಿರುವುದಿಲ್ಲ. ದಾವಾ ಆಸ್ತಿಯನ್ನು 1990 ರಲ್ಲಿ ಮೆಹಬೂಬಿ ಎಂಬುವವರು 1 ನೇ ಪ್ರತಿವಾದಿಗೆ ಮಾರಾಟ ಮಾಡಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

2. ಆ ರೀತಿ ಪ್ಯಾರಿಜಾನ್ ರವರ ಹೆಸರಿಗೆ ಜಿಪಿಎ ಆಗಿತ್ತಾ ಅಥವಾ ಕ್ರಯ ಆಗಿತ್ತ ಎಂದು ನನಗೆ ಗೊತ್ತಿರುವುದಿಲ್ಲ. ಸರ್ವೆ ನಂ.412/2 ಆಸ್ತಿಯು ಒಟ್ಟು 4 ಎಕರೆ ಇದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ನನ್ನ ಗಂಡ 2 ನೇ ಪ್ರತಿವಾದಿ ವಿರುದ್ದ ಮತ್ತೊಂದು ದಾವೆ ಸಲ್ಲಿಸಿದ್ದಾರೆ ಎಂದರೆ ಸರಿ. ನನ್ನ ಹೆಸರಿನಲ್ಲಿ ಯಾವುದೇ ದಾಖಲೆಗಳು ಇಲ್ಲದೇ ಇದ್ದರೂ ಪ್ರತಿವಾದಿಗಳ ವಿರುದ್ದ ಸುಳ್ಳು ದಾವೆ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಯು ಅಸ್ಥಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂ.411 ಮತ್ತು 412 ರಲ್ಲಿ ನಮಗೆ ಯಾವುದೇ ನಿವೇಶನ ಇರುವುದಿಲ್ಲ ಎಂದರೆ ಸರಿಯಲ್ಲ.

**(ಈ ಹಂತದಲ್ಲಿ ಮುಂದುವರಿದ ಪಾಟಿ ಸವಾಲಿಗೆ ಕಾಲವಕಾಶ ಕೋರಿದ್ದು, ನೀಡಲಾಯಿತು.)**

**(ಉಕ್ತಲೇಖನವನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).**

**ಓ.ಹೇ.ಕೇ.ಸ.ಎ. ಒಪ್ಪಲಾಗಿದೆ**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**

**ದೇವನಹಳ್ಳಿ.**